in achieving this objective, the Corporation had to follow the rules and regulations regarding reservation of posts for SC/ST candidates. The Corporation accordingly, notified these vacancies to Employment Exchange, shimoga with a request to sponsor persons who were affected by submersion of their lands. The Employment Exchange, apart from sponsoring candidates effected by submersion had recommended names of others as well. As the objective of the scheme was to provide maximum employment opportunities in Chakra/Varahi project to persons affected by submersion, even though the Employment Exchange had sponsored other candidates, the interview was confined only to persons affected by submersion. However, as it was statutary to provide reservation quota for SC/ST canidates and as no candidates were available from among the candidates affected by submersion, SC/ST candidates not belonging to submersion area were considered.

The initial induction of 67 people was more aimed at providing succour to persons affected by submersion than to meet the manpower requirements in this discipline. The deployment of personnel from other projects is only for Electrical erection works at Varahi Underground Power House and other works. It may also be mentioned that in case the need for services of Security Watchmen arises in this project, the requirement will be met only from out of the Wait List.

It may also be mentioned that there is a Wait List containing 34 names. As one candidate of main list containing 67 did not report, the first candidate in the Wait List has been offered the job. The case of the remaining 33 would come up for consideration as and when the need for services of the Security Watchmen arises in this project and that these requirements would be met only by operating this Wait List.

ಗೈರು ಹಾಜರಿಗೆ ಅನುಮಂತಿ ಕೋರಿಕೆ

ಅಧ್ಯಕ್ಷರು.—ವಿಧಾನ ಸಭಾ ಸದಸ್ಯರಾದ ಶ್ರೀ ಎನ್. ಎಂ. ಅಡ್ಯಂತಾಯರವರು ಭಾರತ ಸರ್ಕಾರದ ಪ್ರತಿನಿಧಿಯಾಗಿ ಜಿನೀವಾದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಕಾರ್ಮಿಕರ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಆದ್ದರಿಂದ ಮಾನ್ಯ ಸದಸ್ಯರು ದಿನಾಂಕ ೧೯-೬-೮೮ ರಿಂದ ೨೨-೬-೮೮ ರವರೆಗೆ ಕರ್ನಾಟಕ ವಿಧಾನ ಸಭೆಯ ಉಪವೇಶನಗಳಿಗೆ ಗೈರುಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.

ಶ್ರೀ ಎನ್. ಎಂ. ಅಡ್ಯಂತಾಯರವರು ಮೇಲೆ ಸೂಚಿಸಿದ ಅವಧಿಯಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೆ ?

ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ

ಅಧ್ಯಕ್ಷರು.—ಶ್ರೀ ಎನ್. ಎಂ. ಆಡ್ಯಂತಾಯರವರಿಗೆ ಗೈರುಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

ಶ್ರೀ ಎನ್. ಎಂ. ಆಡ್ಯಂತಾಯರವರಿಗೆ ಗೈರುಹಾಜರಾಗಲು ಅನುಮತಿ ನೀಡಲಾಯಿತು

ವಿತ್ತೀಯ ಕಾರ್ಯ ಕಲಾಪಗಳು

೧೯೮೮–೮೯ನೇ ಸಾಲಿಗೆ ಸಂಬಂಧಿಸಿದಂತೆ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆಗಳ ಸಂಖ್ಯೆ : ೧೦, ೩೭, ೩೮, ೫೯ ಮತ್ತು ೪೮.

(ರೇಷ್ಮೆ, ರಾಜ್ಯ ವಿಧಾನ ಮಂಡಲ, ನ್ಯಾಯಂ ಪರಿಪಾಲನೆ ಮಿನಂಗಾರಿಕೆ, ರೇವು ಮತ್ತು ಜಲಸಾರಿಗೆ ಸೇವಾ ಇಲಾಖೆಗಳು)

ಶ್ರೀ ಜಿ. ರಾಜುಗೌಡ (ಹನೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆ ಸಂಖ್ಯೆ ೧೦, ೩೭, ೩೮, ೫೯ ಮತ್ತು ೪೮ ಅಂದರೆ ರೇಷ್ಮೆ, ವ್ಯವಸಾಯ, ರಾಜ್ಯ ವಿಧಾನ ಮಂಡಲ, ನ್ಯಾಯ ಪರಿಪಾಲನೆ, ಮಿನಂಗಾರಿಕೆ ರೇವು ಮತ್ತು ಜಲ ಸಾರಿಗೆ ಸೇವೆ ಈ ಇಲಾಖೆಗಳ ಬೇಡಿಕೆಗಳನ್ನು ನಾನು ಖಂಡತುಂಡವಾಗಿ ವಿರೋಧಿಸಿ ಕೆಲವು ವಿಚಾರಗಳನ್ನು ಪ್ರಸ್ತಾಪಮಾಡುವುದಕ್ಕೆ ಇಚ್ಛಿಸುತ್ತೇವೆ.

ಮಾನ್ಯ ಅಧ್ಯಕ್ಷರೇ, ಈ ರೇಷ್ಮೆ ಬಗ್ಗೆ ಕೆಲವು ವಿಚಾರಗಳನ್ನು ಪ್ರಪ್ರಥಮವಾಗಿ ಹೇಳಲು ನಾನು ಇಷ್ಟಪಡುತ್ತೇನೆ. ಕರ್ನಾಟಕ ರೇಷ್ಮೆ ಜಗತ್ ಪ್ರಸಿದ್ಧವಾದುದು. ಇದರ ಸೊಬಗು, ಇದರ ನಾವಿನ್ಯತೆ, ಸೌಂದರ್ಯ, ಇದರ ಶ್ರೀಮಂತಿಕೆ ಬೇರೆ ಯಾವುದರಿಂದಲೂ ತುಂಬಲು ಸಾಧ್ಯವಿಲ್ಲ. ಈ ರೇಷ್ಮೆಗೆ ೨೦೦ ವರ್ಷಗಳ ಚರಿತ್ರೆ ಇದೆ. ಇದು ಈ ರಾಜ್ಯದ ಕಲ್ಪವೃಕ್ಷ ಹಾಗೂ ಕಾಮಧೇನು. ಇದು ದುಡಿಮೆಗೆ ಪ್ರಾಧಾನ್ಯವಾದ ಒಂದು ಕೈಗಾರಿಕೆಯಾಗಿದೆ. ಅತಿ ಕಡಿಮೆ ಬಂಡವಾಳದಲ್ಲಿ ಹೆಚ್ಚಿನ ಜನರಿಗೆ ವರ್ಷ ಪೂರ್ತಿ ಲಾಭದಾಯಕವಾದ ಉದ್ಯೋಗವನ್ನು ಕೊಡತಕ್ಕಂಥ ಹೆಸರುವಾಸಿಯಾದ ಗೃಹ ಕೈಗಾರಿಕೆ ಇದಾಗಿದೆ. ಒಂದು ಎಕರೆ ಹಿಪ್ಪನೇರಳೆಯಲ್ಲಿ ಸುಮಾರು ಐದು ಜನರಿಗೆ ಹಳ್ಳುಪಿನಿಂದ ಹಿಡಿದು ಬಟ್ಟೆಯಾಗುವವರೆಗೂ ವರ್ಷ ಪೂರ್ತಿ ಕೆಲಸವನ್ನು ಕೊಡತಕ್ಕಂಥ ಒಂದು ಒಳ್ಳೆಯ ಕೈಗಾರಿಕೆ. ಋತುಮಾನ ಅಡಚಣೆ ಇಲ್ಲದೆ ವರ್ಷ ಪೂರ್ತಿ ಈ ಕೈಗಾರಿಕೆಯನ್ನು ಈ ರಾಜ್ಯದಲ್ಲಿ ಮಾಡಲು ಸಾಧ್ಯ ಇದೆ. ರೇಷ್ಮೆ ಕೃಷಿ ಮತ್ತು ರೇಷ್ಮೆ ಕೈಗಾರಿಕೆ ಇಲ್ಲದಿದ್ದರೆ ಮೈಸೂರು, ಬೆಂಗಳೂರು, ತುಮಕೂರು ಮತ್ತು ಕೋಲಾರ ಸತತವಾಗಿ ಬರಗಾಲ ಪ್ರದೇಶವಾಗುತ್ತಿತ್ತು. The severity of drought is not felt in the area where Sericulture is there. ಈ ರೇಷ್ಮೆ ಕೈಗಾರಿಕೆ ಇಲ್ಲದಿದ್ದರೆ ಕ್ಷಾಮವೆಂದು ಬಿಸಿ ಬಿಸಿಯಾಗಿ ತಟ್ಟುತ್ತಿತ್ತು. ಎಲ್ಲಿ ರೇಷ್ಮೆ ಕೃಷಿ ಮತ್ತು ಕೈಗಾರಿಕೆ ಇದೆಯೋ ಅಲ್ಲಿ ಕ್ಷಾಮ ತಟ್ಟುವುದಿಲ್ಲ. ಬಂಡವಾಳ ಪ್ರಧಾನವಾದ ಕೈಗಾರಿಕೆಗಳಿಗಿಂತ ದುಡಿಮೆ ಪ್ರಧಾನವಾದ ಕೈಗಾರಿಕೆಗಳು ಹೆಚ್ಚು ಹೆಚ್ಚು ಗ್ರಾಮಾಂತರ ಪ್ರದೇಶಗಳಲ್ಲಿ ಬಂದರೆ ಅದರಿಂದ ಹೆಚ್ಚಿನ ಜನರಿಗೆ ಉದ್ಯೋಗ ಒದಗಿಸುವುದರ ಜೊತೆಗೆ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಅನುಕೂಲವಾಗುತ್ತದೆ. ಸ್ವಾಮಿ, ನೂರಾರು ಕೋಟಿ ರೂಪಾಯಿ ವಿದೇಶಿ ವಿನಿಮಯ ಗಳಿಸತಕ್ಕಂಥ ಈ ಒಂದು ಕೈಗಾರಿಕೆ ಈ ರಾಜ್ಯದಲ್ಲಿ ಇನ್ನೂ ಹೆಚ್ಚು ಅಭಿವೃದ್ಧಿಯಾಗಬೇಕಾಗಿರುವುದು ಬಹಳ ಅವಶ್ಯಕವಾಗಿದೆ. ಈ ಇಲಾಖೆಗೆ ಆಡಳಿತಾತ್ಮಕವಾಗಿ ಒಬ್ಬ ಡೈರೆಕ್ಟರ್ ಇರುತ್ತಾರೆ. ಯಾರು ಈ ಇಲಾಖೆಯಲ್ಲಿ ೨೦–೩೦ ವರ್ಷಗಳು ಸೇವೆ ಸಲ್ಲಿಸಿ ಹೆಚ್ಚು ಪರಿಣತಿಯನ್ನು ಪಡೆದಿದ್ದಾರೆ, ಅಂಥವರನ್ನೂ ಆಡಿಷನಲ್ ಡೈರೆಕ್ಟರಾಗಿ ಮಾಡಬೇಕೆಂದು ಕಳೆದಸಾರಿ ಈ ಸದನದಲ್ಲಿ ನಾನು ಸೂಚನೆ ಮಾಡಿದ್ದೆ. ಆದರೆ ಅದು ಇನ್ನೂ ಕಾರ್ಯಗತವಾಗಲಿಲ್ಲ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)